ಶ್ವೇತ ವಸ್ತ್ರಧಾರಿಣಿ. ಸ್ನಾನ ಮಾಡಿ ಬಂದಂತಿತ್ತು. ಅವಳು ನನ್ನನ್ನು ನೋಡಿದಳು. ಮುಖದಲ್ಲಿ ಯಾವ ಭಾವವೂ ಇರಲಿಲ್ಲ. ಒಂದು ತುಳಸೀ ದಳವನ್ನು ಕಿತ್ತು ಕೂದಲಿಗೆ ಸಿಗಿಸಿ ಅಂಗಳಿಕ್ಕಿಳಿದು ರಸ್ತೆಯಲ್ಲಿ ನಡೆಯುತ್ತಾ ಹೋದಳು.

'ಹಳೆಯ ಸರ್ಪಬನ ಈಗ ದೇವಸ್ಥಾನವಾಗಿದೆ. ದಿನ ಬೆಳಿಗ್ಗೆ ಸಂಜೆ ಅವಳು ಅಲ್ಲಿಗೆ ಹೋಗಿ ಬರ್ತಿರ್ತಾಳೆ. ಉಳಿದ ಮೂವರು ಅವರವರ ಗಂಡಂದಿರ ಮನೆಯಲ್ಲಿದ್ದಾರೆ. ಮೊದಲು ರತಿಯ ಮದುವೆಯಾಯಿತು. ಬೇರೊಬ್ಬನೊಂದಿಗೆ ಪರಾರಿಯಾಗುವ ಮೊದಲೇ ಅವಳ ಮದುವೆ ಮಾಡಿಸಿದ್ದರಿಂದ ನಮ್ಮ ಮಾನ ಉಳಿಯಿತು. ಅದರ ನಂತರ ದೊಡ್ಡವಳ ಮದುವೆ. ತುಂಬಾ ರಾಸುಗಳು, ಗದ್ದೆ ಜಾಗಗಳು ಇರುವ ಮನೆಗೆ ಅವಳನ್ನು ಮದುವೆ ಮಾಡಿ ಕಳುಹಿಸಿದ್ವಿ. ಕಿರಿಯವಳು ಗಂಡನ ಜೊತೆ ಸೌದಿಯಲ್ಲಿದ್ದಾಳೆ.'

ಸುಮಿತ್ರ ಮತ್ತು ಅತ್ತೆ ಮೂರು ವರ್ಷಗಳಿಂದ ಸನ್ಯಾಸಿ ಮಠದಲ್ಲಿರುವಂತೆ ಗೆಡ್ಡೆ ಗೆಣಸುಗಳನ್ನು ತಿಂದು ಜೀವ ಉಳಿಸಿಕೊಂಡಿದ್ದಾರೆ. ಸುಮಿತ್ರ ಹೆಚ್ಚು ಮಾತನಾಡುವುದಿಲ್ಲ. ಆದ್ದರಿಂದ ಮನೆಯಲ್ಲಿರುವ ಮೂಕ ಪ್ರಾಣಿಗಳೊಂದಿಗೆ ಮಾತನಾಡಿ ದಿನದೂಡುತ್ತಿದ್ದಾಳೆ. ಹಿಂದೆ ಗೋಡೆಯ ಮೇಲೆ ಬಹಳಷ್ಟು ಭಾವಚಿತ್ರಗಳಿದ್ದವು. ಮಾವ ಮತ್ತು ಸ್ನೇಹಿತರು ಮಾವನ ಮದುವೆಯಲ್ಲಿ ತೆಗೆದುಕೊಂಡಿದ್ದು, ಒಂದೊಂದು ಮಗುವಾದಾಗಲೂ ತೆಗೆದ ಫೋಟೊ ಅಂತೆಯೇ ಮಗು ಹುಟ್ಟಿದ ತಕ್ಷಣ ತೆಗೆದ ಫೋಟೊ ಆದರೆ ಈಗ ಯಾವುದೂ ಕಾಣಿಸುತ್ತಿಲ್ಲ. ಈಗ ಮಾವನ ಎನ್‌ಲಾರ್ಜ್ ಮಾಡಿದ ಇತ್ತೀಚೆಗಿನ ಫೋಟೊ, ಪರಶ್ಶಿಸಿ ಮುತ್ತಪ್ಪ ದೇವರ ವರ್ಣಚಿತ್ರ, ಟೈಕಟ್ಟಿದ ನನ್ನ ಹಳೆಯ ಚಿತ್ರ.... ಇವಿಷ್ಟೆ ಅಲ್ಲಿರುವುದು.

'ಫೋಟೋಗಳನ್ನೆಲ್ಲಾ ಪೊಲೀಸಿನವರು ಒಡೆದು ಚೆಂದಿ ಮಾಡಿದರು'

ನಾನು ತಪ್ಪಿಸಿಕೊಂಡು ಹೋದ ಮೂರನೆಯ ದಿನ ಮಧ್ಯಪ್ರದೇಶದಿಂದ ಆಮದು ಮಾಡಿದ ಒಂದಷ್ಟು ಪೊಲೀಸಿನವರು ಬಂದಿದ್ದರು. ಕಬ್ಬಿನ ಥುಲ್ಲೆಯಂತಿರುವ ಲಾಠಿಯನ್ನು ಹಿಡಿದು ಪೊಲೀಸ್ ವ್ಯಾನನ್ನು ಬನದ ಬಳಿ ನಿಲ್ಲಿಸಿ ಕೆಳಗಿಳಿದಿದ್ದರು. ಜಂಬಲ್ ಕಾಡಿನ ದರೋಡೆಕಾರರನ್ನು ಸದೆಬಡಿಯಲು ಸನ್ನದ್ಧರಾಗಿ ಬಂದಂತೆ ಕಂಡರು. ಅವರು ಸಿಕ್ಕಿಸಿಕ್ಕಿದ ಮನೆಗಳನ್ನೆಲ್ಲಾ ಹತ್ತಿ ಇಳಿದರು. ಮನೆ, ಶಾಲೆ, ವಾಚನಾಲಯಗಳನ್ನು ಹೊಡೆದು, ಬಡಿದು ನೆಲಕಚ್ಚಿಸಿದರು. ಮಾವನ ಮನೆಯೊಳಗೆ ನುಗ್ಗಿ ಗೋಡೆಯ ಮೇಲಿನ ಫೋಟೋಗಳನ್ನೆಲ್ಲಾ ಬಡಿದು ನಾಶಪಡಿಸಿದರು. ಎರಡು ಫೋಟೋಗಳು ಮಾತ್ರ ಅವರ ಕಣ್ಣಿಗೆ ಬೀಳದೆ ಉಳಿದುಕೊಂಡವು. ಒಂದು ದೇವರದ್ದು ಮತ್ತೊಂದು ಬಢಾಬಾಬುವಿಂದು.

ಅಂದಿನ ವಿದ್ಯಾವಂತರಲ್ಲಿ ಪ್ರತಿಯೊಬ್ಬರು ಟೈ ಮತ್ತು ಕೋಟು ಧರಿಸಿ ಫೋಟೊ ತೆಗೆಸಬೇಕೆಂಬ ಆಸೆಯನ್ನಿಟ್ಟುಕೊಂಡಿದ್ದರು. ಎಲ್ಲಾ ಫೋಟೊ ಸ್ಟುಡಿಯೋಗಳಲ್ಲೂ ಹಲವರು ಹಾಕಿ ಹಾಕಿ ಹಳೆಯದಾದ ಕೋಟು ಟೈಗಳು ಇರುತ್ತಿದ್ದವು.

## ಇಲ್ಲಿಯವರೆಗೆ



ಯುದ್ಧದ ದಳ್ಳುರಿಯಿಂದ ತಪ್ಪಿಸಿಕೊಂಡು ಗಲ್ಫ್‌ನಿಂದ ತವರಿಗೆ ಬಂದವನಿಗೆ ಎದುರಾದುದು ಅನಿರೀಕ್ಷಿತ ಸನ್ನಿವೇಶ. ಶ್ರೀದೇವಿ ಸಂಪೂರ್ಣ ಬೇರೆಯವಳಾಗಿ ವರ್ತಿಸುತ್ತಿದ್ದಳು. ಯಾವ ರಾಜಕೀಯದಿಂದ ತನ್ನ ಗಂಡ ದೂರವಿರಬೇಕೆಂದು ಬಯಸುತ್ತಿದ್ದಳೋ, ಅದೇ ರಾಜಕೀಯದ ಭಾಗವಾಗಿ ದಾಳಗಳನ್ನು ಉರುಳಿಸುತ್ತಿದ್ದಳು. ಅವಳೊಂದಿಗೆ, ಆ ಊರಿನ ರಾಜಕೀಯದೊಂದಿಗೆ ಬದುಕುವುದು ಸಾಧ್ಯವಿಲ್ಲ ಎನ್ನಿಸಿದಾಗ, ಟ್ಯಾಕ್ಸಿಯ ದಿಕ್ಕು ಬದಲಾದುದು ಮಾವನ ಊರಿನತ್ತ. ಅಲ್ಲಿ ಸುಮಿತ್ರಾ ತನಗಾಗಿ ಇನ್ನೂ ಕಾಯುತ್ತಿರಬಹುದೆ? ತನ್ನನ್ನು ನೋಡಿ ಅವರ ಮೈಮನಗಳಲ್ಲಿ ಪುಳಕದ ಅಲೆಗಳು ಏಳಬಹುದೇ? ಊಹಾಲೋಕದಲ್ಲಿ ಪಯಣಿಸುತ್ತಿರುವಾಗ ಊರು ಸನ್ನಿಹಿತವಾಗತೊಡಗಿತು.

ಕೋಟಿಲ್ಲದಿದ್ದರೂ ಟೈ ಕಟ್ಟಿ ಒಂದು ಫೋಟೊ ತೆಗೆಯುವ ಆಶೆಯಾಗಿ ಒಂದು ಸ್ಟುಡಿಯೋದೊಳಕ್ಕೆ ಹೋದೆ. ಫೋಟೋಗ್ರಾಫರ್ ಕೊರಳಿಗೆ ಟೈ ಬಿಗಿದು ಪೌಡರು ಹಚ್ಚಲು ಹೇಳಿದ. ಸ್ಟಡಿ, ಕ್ಲಿಕ್.....ಮೂರು ದಿನಗಳ ನಂತರವಷ್ಟೇ ಫೋಟೊ ಸಿಗುವುದು. ಒಂದು ಪ್ರತಿಯನ್ನು ಎನ್‌ಲಾರ್ಜ್ ಮಾಡಲು ಹೇಳಿದೆ. ಮೂರು ದಿನಗಳು ಆತಂಕ, ಕುತೂಹಲದಿಂದಲೇ ಕಳೆದೆ. ಎನ್‌ಲಾರ್ಜ್ ಮಾಡಿಸಿದ ಪ್ರತಿಯನ್ನು ಫ್ರೇಂ ಹಾಕಿಸಿ ಗೋಡೆಗೆ ನೇತು ಹಾಕಿಸಲಾಯಿತು. ಮಾವ ಮತ್ತು ಮುತ್ತಪ್ಪ ದೇವರ ಫೋಟೋದ ಮುಂದೆ ಗಂಧದ ಕಡ್ಡಿಯ ತುಣುಕುಗಳು ಮತ್ತು ಬೂದಿಯೂ ಇದ್ದವು. ಗಂಧದಕಡ್ಡಿ ಕಾಯುತ್ತಿದ್ದ ಬಢಾಬಾಬು ಕೊನೆಗೆ ಎಲ್ಲವನ್ನು ಕಳೆದುಕೊಂಡು ಒಬ್ಬ ಛೋಟಾ ಬಾಬುವಾಗಿ ಮರಳಿ ಬಂದಿದ್ದಾನೆ.

ಅಧ್ಯಾಯ ಹದಿನೈದು

ಹಗಲೆಲ್ಲಾ ನೆಮ್ಮದಿಯಾಗಿ ಮಲಗಿ ನಿದ್ರಿಸಿದೆ. ಹೀಗೆ ನಿದ್ರಿಸಿ ಎಷ್ಟೋ ಕಾಲವಾಗಿತ್ತು. ಮಧ್ಯಾಹ್ನವಾಗುವಷ್ಟರಲ್ಲಿ ಅತ್ತೆ ಊಟಕ್ಕೆ ಕರೆದರು. ಬೆಳಿಗ್ಗೆ ಕುಸಲಕ್ಕಿ ಗಂಜಿ ಮತ್ತು ತಡಗುಣಿ ಕಾಳಿನ ಪಲ್ಯ ಸೇವಿಸಿ ನಿದ್ರಿಸಲು ಮಲಗಿದವನು. ಅದು ಜೀರ್ಣಗೊಂಡಿರಲಿಲ್ಲ. ಊಟ ಬೇಡವೆಂದು ಹೇಳಿ ಪುನಃ ಮಲಗಿದೆ.

ಹಳೆಯ ಕೋಣೆ, ಹಳೆಯ ವಾಸನೆ, ಪುರಳಿಮಲೆಯಿಂದಬೀಸುವತಣ್ಣನೆಯಗಾಳಿ.ಹೆಚ್ಚು ಹೊತ್ತು ಮಲಗಿದ್ದರಲ್ಲಿ ಅಚ್ಚರಿಯಿಲ್ಲವೆನಿಸಲಿಲ್ಲ. ಎಚ್ಚರಗೊಂಡಾಗ ಸಂಜೆ ಕಳೆದಿತ್ತು. ಮನೆಯ ಹೊರಗಿರುವ ಒಲೆಯಲ್ಲಿ ತರಗೆಲೆ ಮತ್ತು ಒಣ ತೆಂಗಿನ ಗರಿಗಳನ್ನಿಟ್ಟು ಅತ್ತೆ ನೀರು ಕಾಯಿಸುತ್ತಿದ್ದರು. ಹಿತ್ತಾಳೆಯ ಪುಟ್ಟ ಪಾತ್ರೆಯಲ್ಲಿ ಮೆಣಸಿನ ಬಳ್ಳಿ ಮತ್ತು ಎಲೆ ಹಾಕಿ ಬಿಸಿ ಮಾಡಿದ ಕೊಬ್ಬರಿ ಎಣ್ಣೆಯನ್ನು ಬಚ್ಚಲು ಮನೆಯಲ್ಲಿ ತೆಗೆದಿರಿಸಿದ್ದರು. ಕೆಂಬಣ್ಣದ ಲೈಫ್‌ಬಾಯ್ ಸೋಪಿನ ಹೊಸ ಬಿಲ್ಲೆ ಸೋಪುಡಬ್ಬಿಯನ್ನು ಮೀರಿ ನಿಂತಿತ್ತು. ಖಾರ ಸೋಪು ಹಾಕಿ ಹಬೆಯಲ್ಲಿ ಬೇಯಿಸಿ ಒಗೆದು, ಕಬ್ಬಿಣದ ಪೆಟ್ಟಿಗೆಯಲ್ಲಿ ಮಡಿಬಿಟ್ಟಿದ್ದ ಹೂವಿನ ವಾಸನೆಯ ತೋರ್ತನ್ನು (ಟವೆಲು) ಕೈಗೆ ಕೊಟ್ಟು ಅತ್ತೆ ಹೇಳಿದರು.

'ಬೇಗ ಸ್ನಾನ ಮಾಡಿ ಬಾ'

ಇಷ್ಟು ಸಮೃದ್ಧವಾಗಿ ಇತ್ತೀಚೆಗಂತು ಸ್ನಾನ ಮಾಡಿರಲಿಲ್ಲ. ಎಣ್ಣೆ ಹಚ್ಚಿ ನಾಲ್ಕೈದು ನಿಮಿಷಗಳ ಕಾಲ ದೇಹವನ್ನು ಬಾಗಿಸಿ, ಬಗ್ಗಿಸಿ ಸಂದಿಗೊಂದಿಗಳಿಗೆಲ್ಲೆಲ್ಲಾ ಎಣ್ಣೆ ತಲುಪುವಂತೆ ಮಾಡಿದೆ. ಮತ್ತೊಮ್ಮೆ ಸುವಾಸನೆಯುಕ್ತ ಕೊಬ್ಬರಿಯೆಣ್ಣೆಯನ್ನು ತಲೆಗೆ ಹಚ್ಚಿದೆ. ಮಸಿ ಹಿಡಿದ ತಾಮ್ರದ ಪಾತ್ರೆಯ ನೀರನ್ನು ಮತ್ತೊಂದು ಪಾತ್ರೆಯಲ್ಲಿರುವ ತಣ್ಣೀರಿಗೆ ಸುರಿದು ಬಿಸಿಯನ್ನು ಸಮತೋಲನಗೊಳಿಸಿದೆ. ಅನಂತರ ಚೊಂಬಿನಿಂದ ಮೈಗೆ ನೀರು ಸುರುವಲು ಪ್ರಾರಂಭಿಸಿದೆ. ಸೋಪಿನ ನೊರೆ ಬರಿಸಿ ಭೂತಕಾಲಕ್ಕೆ ಮರಳಿದೆ. ನೀರನ್ನು ಮತ್ತಷ್ಟು ತಣ್ಣಗಾಗಿಸಿ ತಲೆಗೆ ಸುರುವಿಕೊಂಡೆ. ಪಾತ್ರೆಯಲ್ಲಿ ಉಳಿದಿದ್ದ ಬಿಸಿನೀರಿನಲ್ಲಿ ತೋರ್ತನ್ನು ಅದ್ದಿ ತೆಗೆದು ಹಿಂಡಿ ಮುಖಕ್ಕೆ ಸೇರಿಸಿ ಹಿಡಿದೆ. ಹಾಯ್! ಎಂತಹ ಬೆಚ್ಚಗಿನ ಅನುಭವ! ಎಂತಹ ನಿವೃತ್ತಿ!

ಖಾರವಾದ ಒಣಮೀನಿನ ಸಾರ. ಕೆಸುವಿಗೆಡ್ಡೆಯ ಪಲ್ಯವನ್ನು ಮೆದ್ದು ಊಟ ಮಾಡಿದೆ. ಉಪ್ಪಿನಲ್ಲಿ ಹಾಕಿಟ್ಟಿದ್ದ ನಾಟಿ ಮಾವಿನಕಾಯಿ, ಉಪ್ಪು ಹೆಚ್ಚಾಗಿರುವ ಅದರ ರಸಂ ಸೇರಿದಾಗ ಊಟದ ಸವಿ ಹೆಚ್ಚಾಯಿತು. ಅತ್ತೆಯೇ ನನಗೆ ಊಟ ಬಡಿಸಿದ್ದರು. ಸುಮಿತ್ರ ಅಲ್ಲಿರುವುದು ತಿಳಿಯಲೇ ಇಲ್ಲ. ಅವಳು ಅಲ್ಲಿಯೇ ಗೋಡೆಗೊರಗಿ ನಿಟ್ಟುಸಿರನ್ನು ನಿಯಂತ್ರಿಸುತ್ತಾ ನನ್ನ ಮಾತುಗಳಿಗೆ ಕಿವಿಗೊಡುತ್ತಿರಬಹುದೆಂದೆನಿಸಿತು.

'ಎಲ್ಲಿದ್ದೆಯಪ್ಪ ಇಷ್ಟು ದಿನ?' ಈ ಪ್ರಶ್ನೆ ಅತ್ತೆಯ ಬಾಯಿಯಿಂದ ಬರಬಹುದೆಂದು ನಿರೀಕ್ಷಿಸುತ್ತಲೇ ಇದ್ದೆ. ಗೋಡೆಗಳಾಚೆ ಇರುವ ಕಿವಿಗಳು ಅದಕ್ಕೆ ಉತ್ತರ ತಡಕಾಡುತ್ತಿರಬಹುದು. ಆದರೆ ಅಂತಹ ಪ್ರಶ್ನೆ ಅತ್ತೆ ಕೇಳಲೇ ಇಲ್ಲ. ಸುಮಿತ್ರಳಂತು ಖಂಡಿತವಾಗಿಯೂ ಕೇಳಲಾರಳು. ಆದರೆ ಅತ್ತೆ ನಾನು ಕೇಳದೆಯೇ ನಾನು ತಿಳಿಯಬೇಕಾಗಿದ್ದೆಲ್ಲವನ್ನು ಅವರೇ ಹೇಳುತ್ತಿದ್ದರು.

ಮೂರು ಮಕ್ಕಳ ಮದುವೆ ಮುಗಿಸಿ ಮಾವ ಹೋಗಿದರು. ಕಿರಿಯವಳ ಗಂಡ ಮೊದಲು ಸುಮಿತ್ರಳನ್ನು ನೋಡಲೆಂದು ಬಂದಿದ್ದ. ಈ ಹಿಂದೆ ಬನದ ತೆಯ್ಯಂಗೆ ಬಂದಿದ್ದ. ಅಂದೇ ಅವಳ ಬಗ್ಗೆ ವಿಶೇಷ ಆರಾಧನಾ ಭಾವ ಮೊಳಕೆಯೊಡೆಯಿತಂತೆ.